ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday, the 1st July 1981, Ashada , 10, 1903. S.E.

The House met in the Assembly Chamber, Vidhana Soudha at Twelve of the Clock.

[Mr. Deputy Speaker (Sri Bapu Rao Hulsoorkar) in the Chair].

STARRED QUESTIONS
(to which oral Answers were given)

Working of TAPCMS at Channapatna

53 Sri D. T. Ramu (Channapatna).—Will the Minister for Co-operation be pleased to state.—

(a) whether it has come to the notice of Government that TAPCMS Channapatna is running under loss since last 4 years.

(b) is it a fact that the Administrator who was there in the years 1976-77, 77-78 has misappropriated the amount to the tune of Rs 97,000;

(c) whether it is also a fact that another Administrator who was there in the year 78-79 has misappropriated to the tune of Rs. 19,000

(d) Action taken by Government against these two Officers;

(e) steps taken by Government to improve the society.

Sri H.C. Srikantaiah (Minister for Co-operation).—

(a) Yes.

(b) Yes.

(c) Yes.

(d) Surcharge proceedings under Section 69 of the KCS Act 1959 are initiated in the Court of the Joint Registrar of Co-operative Societies, Bangalore and they are pending disposal. Disciplinary proceedings under the KCS (CCA) Rules, 1957 have also been initiated against them.

(e) The following steps have been taken to improve the society

(1) Government have nominated three nominees as Directors of the Society to safeguard the interest of the Society.

(2) Government have sanctioned share capital of Rs. 50,000 during the year 1980-81.

(3) The Society has enrolled 40 new members.

(4) The Society has improved its business by reducing the net losses, during the year 1979-80 and increasing the turn over in 1980.

ಶ್ರೀ ಡಿ.ಟಿ. ರಾಮು.—ಸನ್ಮಾನ್ಯ ಉಪಾಧ್ಯಕ್ಷರೆ, ನನ್ನ "ಆ" ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ೯೭,೦೦೦ ರೂಪಾಯಿಗಳು ದುರುಪಯೋಗ ನಡೆದಿರುವುದು ನಿಜವೆಂದು ಒಪ್ಪಿಕೊಂಡಿದ್ದಾರೆ ಆದಕಾರಣ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಲೆಕ್ಕ ಪರಿಶೋಧಕರ ವರದಿ ಸರ್ಕಾರದ ಗಮನಕ್ಕೆ ಬಂದ ಮೇಲೆ, ಒಬ್ಬರಲ್ಲ ಇಬ್ಬರು ಆಡ್ಮಿನಿಸ್ಟ್ರೇಟರ್ಸ್ ಮೇಲೆ ಏನು ದೂರು ಬಂತು, ಆ ಬಗ್ಗೆ ಈಗ ಅವರಿಗೆ ನೋಟಿಸ್ ಸರ್ವ್ ಮಾಡಿ ಏನು ಆಕ್ಷನ್ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಸಿದ್ಧತೆ ಮಾಡುತ್ತಿದ್ದೇವೆ.

ಶ್ರೀ ಡಿ.ಟಿ. ರಾಮು.—ಇದು ಕ್ರಿಮಿನಲ್ ಮೊಕದ್ದಮೆ ಈ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸಸ್ಪೆಂಡ್ ಮಾಡತಕ್ಕದು, ಅದು ಒಳ್ಳೆಯದೋ ಕೆಟ್ಟದ್ದೋ ಎನ್ನತಕ್ಕವರು ನಾವಲ್ಲ. ಅವರನ್ನು ಸಸ್ಪೆಂಡ್ ಮಾಡಿದರೆ ನಮ್ಮ ಅಧಿಕಾರಿಗಳು ಇನ್ವೆಸ್ಟಿಗೇಟ್ ಮಾಡುವುದಕ್ಕೆ ತೊಂದರೆಯಾಗುತ್ತದೆ. ಈಗ ಅವರಿಗೆ ನಾವು ನೋಟೀಸ್ ಕೊಟ್ಟಿದ್ದೇವೆ. ಆಡಿಟ್ ರಿಪೋರ್ಟಿನ ಆಧಾರದ ಮೇಲೆ ಅವರ ಮೇಲೆ ಆಪಾದನೆ ಬಂದಿದೆ. ಅವರಿಗೆ ಸರಿಯಾದ ಕಾಲಾವಕಾಶ ಕೊಡಲಿಲ್ಲ ಎನ್ನುವ ಭಾವನೆ ಅಧಿಕಾರಿಗಳಲ್ಲಿ ಇದೆ. ಅವರಿಗೆ ಅವಕಾಶ ಕೊಡಬೇಕು. ನೋಟೀಸ್ ಸರ್ವ್ ಮಾಡಲಾಗಿದೆ.

ಶ್ರೀ ಸಿ. ಅಪ್ಪಾಜಿ.—ಹಣ ದುರುಪಯೋಗವಾಗಿದೆಯೋ ಇಲ್ಲಾ ಮಿಸ್ ಅಪ್ರೋಪ್ರಿಯೇಷನ್ ಆಗಿದೆಯೋ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಿಸ್ ಅಪ್ರೋಪ್ರಿಯೇಷನ್ ಆಗಿದೆಯೆಂದು ಆಡಿಟ್ ರಿಪೋರ್ಟ್ ಬಂದಿದೆ. ಅದಕ್ಕೋಸ್ಕರ ಸಂಬಂಧಪಟ್ಟ ಅಧಿಕಾರಿಗಳು ಕಾಲಾವಕಾಶ ಕೊಡಬೇಕೆಂದು, ಕಾಲಾವಕಾಶ ಕೊಟ್ಟರೆ ದುರುಪಯೋಗದ ಬಗ್ಗೆ ಸಾಬೀತು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ರಿಜಿಸ್ಟ್ರಾರ್‌ರವರು ನೋಟೀಸ್ ಕೊಟ್ಟಿದ್ದಾರೆ, ಆ ಬಗ್ಗೆ ಹೇಳಿಕೆ ಆದಮೇಲೆ ಸರ್ಕಾರ ಇವರ ಮೇಲೆ ಕ್ರಮತೆಗೆದುಕೊಳ್ಳುತ್ತದೆ.

ಶ್ರೀ ಡಿ. ಟಿ. ರಾಮು.—ಸಾಮಾನ್ಯವಾಗಿ ಸೊಸೈಟಿಯ ಕಾರ್ಯದರ್ಶಿ ತಪ್ಪು ಮಾಡಿದಾಗ ಅವರನ್ನು ಮನೆಗೆ ಕಳುಹಿಸುತ್ತಾರೆ. ದೊಡ್ಡವರು ೧ ಲಕ್ಷದವರೆಗೂ ಹಣವನ್ನು ದುರುಪಯೋಗ ಮಾಡಿರುವುದು ಸರ್ಕಾರಕ್ಕೆ ಗೊತ್ತಿದ್ದರೂ ಅಂತಹವರನ್ನು ಸಸ್ಪೆಂಡ್ ಮಾಡದೆ ಅವರಿಗೆ ಬಡ್ತಿ ಕೊಟ್ಟಿರುವುದು ಸರಿಯೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವರಿಂದ ಹಣ ವಸೂಲಿ ಮಾಡಿಕೊಂಡು ನಂತರ ಮನೆಗೆ ಕಳುಹಿಸುತ್ತೇವೆ. ಕ್ರಮ ಕೈಗೊಳ್ಳಬೇಕಾದರೆ ಕ್ರಮವಾಗಿ ಮಾಡಬೇಕು. ಅವರು ಕೋರ್ಟಿಗೆ ಹೋದರೆ ಅವರಿಗೆ ಯಾವುದೇ ರೀತಿಯ ಅವಕಾಶ ಸಿಗಬಾರದು. ಅದಕ್ಕೋಸ್ಕರ ಕಾನೂನು ಪ್ರಕಾರ ನೋಟೀಸ್ ಕೊಟ್ಟು ಹಣವನ್ನು ವಸೂಲಿ ಮಾಡಿಕೊಂಡು ಅವರಿಗೆ ಶಿಕ್ಷೆಯನ್ನು ಕೊಡುತ್ತೇವೆ.

ಶ್ರೀ ಡಿ.ಟಿ. ರಾಮು.—ಸೊಸೈಟಿಯ ಅಧ್ಯಕ್ಷರು ಸುಸ್ತಿದಾರರಾಗಿರುವುದು ನಿಜವೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಡಿ.ಟಿ. ರಾಮು.—ಸಾಮಾನ್ಯ ಜನರಿಗೋಸ್ಕರ ಕೊಟ್ಟಂತಹ ಬಟ್ಟೆಯನ್ನು ಕಳ್ಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾಗ ಮಾಲು ಸಮೇತ ಹಿಡಿದು ಅವರ ಮೇಲೆ ತಾಲ್ಲೂಕಿನ ತಹಶೀಲ್ದಾರರು ಮತ್ತು ಪೋಲೀಸಿನವರು ಕ್ರಿಮಿನಲ್ ಮೊಕದ್ದಮೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ವಿಷಯ ಸರ್ಕಾರದ ಗಮನಕ್ಕೆ ಬಂದರೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ. ಬಟ್ಟೆಯನ್ನು ಕೊಡಿಸುವುದಕ್ಕೆ ಅಪ್ಲಣೆ ಮಾಡಿಸಿದವರು ಮಾನ್ಯ ಸದಸ್ಯರೇ. ಬಟ್ಟೆಯನ್ನು ವಿತರಣೆ ಮಾಡುವಂತಹ ಕಾಲದಲ್ಲಿ ಹಾಜರಿದ್ದು ವಿತರಣೆ ಮಾಡಿಸಿದ್ದರೆ ಈ ರೀತಿಯಾಗಲು ಅವಕಾಶವಾಗುತ್ತಿರಲಿಲ್ಲ. ಮಾನ್ಯ ಸದಸ್ಯರು ಹೇಳಿದಂತ ವ್ಯಕ್ತಿಗಳನ್ನೇ ಸೊಸೈಟಿಗೆ ನೇಮಿಸಲಾಗಿದೆ. ಆದರ ಆಗುಹೋಗುಗಳನ್ನು ಪರಿಶೀಲನೆ ಮಾಡತಕ್ಕಂತಹ ಜವಾಬ್ದಾರಿ ಮಾನ್ಯ ಸದಸ್ಯರ ಮೇಲು ಇದೆ

ಶ್ರೀ ಕೆ. ಎಚ್. ಹನುಮೇಗೌಡ.—೧೯೭೬-೭೭ ಮತ್ತು ೧೯೭೭-೭೮ ರಲ್ಲಿ ನಡೆದಿರತಕ್ಕ ಅವ್ಯವಹಾರ ಇದು. ಒಬ್ಬ ಗೆಜೆಟೆಡ್ ಅಧಿಕಾರಿ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದರೂ ಕೂಡ ಮಾನ್ಯ ಸಚಿವರು ವಿಚಾರಣೆಯಲ್ಲಿ ಸೂಕ್ತ ಕಂಡರೆ ಅವರನ್ನು ಮನೆಗೆ ಕಳುಹಿಸುವುದು ಯಾವಾಗ ೧೦, ೨೦ ರೂಪಾಯಿಗಳನ್ನು ತಿಂದಂತಹ ಸಣ್ಣ ನೌಕರರನ್ನು ಡಿಸ್ಮಿಸ್ ಮಾಡಲಾಗುತ್ತದೆ. ಒಬ್ಬ ಗೆಜೆಟೆಡ್ ಅಧಿಕಾರಿ ಒಂದೂವರೆ ಲಕ್ಷದವರೆಗೂ ಹಣವನ್ನು ದುರುಪಯೋಗ ಮಾಡಿ ಮೂರು ವರ್ಷಗಳು ಆಗಿವೆ. ಅಂತಹವರಿಗೆ ಪ್ರಮೋಷನ್ ಸಿಕ್ಕಿದೆ ಅಂದರೆ ಇದರ ಅರ್ಥವೇನು? ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಸಂಬಂಧಪಟ್ಟ ಅಧಿಕಾರಿಗಳು ಇರಲಿಲ್ಲವೇ? ಅವರ ಮೇಲೆ ಏತಕ್ಕೂ ಸ್ಯೂಟ್ ಇದು ವರೆಗೂ ಕ್ರಮ ತೆಗೆದುಕೊಂಡಿಲ್ಲ. ಸಂಬಂಧಪಟ್ಟ ಮೇಲಿನಾಧಿಕಾರಿಗಳು ತನಿಖೆ ಮಾಡಿದ್ದರೂ ಕೊನೆಗೆ ಸುಮ್ಮನಾಗಿದ್ದಾರೆ. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು ತಕ್ಷಣ ತಾವು ಈ ಸದನಕ್ಕೆ ವರದಿಯನ್ನು ಹೇಳಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರ ಆತಂಕವೇನು ಎಂಬುದು ಪೂರ್ಣವಾಗಿ ನನಗೆ ಗೊತ್ತಿಲ್ಲ. ಕ್ರಮ ತೆಗೆದುಕೊಳ್ಳಬೇಕಾದರೆ ಅದಕ್ಕೆ ನಿಯಮಗಳು ಇದೆ. ನಿಯಮಗಳನ್ನು ಉಲ್ಲಂಘನೆ ಮಾಡಿ ಕ್ರಮವನ್ನು ಜಾರಿಗೊಳಿಸುವುದಕ್ಕೆ ಸಾಧ್ಯವಿಲ್ಲ. ಆಡಿಟ್ ರಿಪೋರ್ಟ್ ಬಂದಿದೆ. ಆಡಿಟರ್‌ಗಳು ನಮಗೆ ಸರಿಯಾದ ಕಾಲವಾಕಾಶ ಕೊಟ್ಟಿಲ್ಲವೆಂದು ಸೊಸೈಟಿಯವರು ವಾದ ಮಾಡುತ್ತಾರೆ. ಇವುಗಳೆಲ್ಲವನ್ನು ಪರಿಶೀಲಿಸಿ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಮತ್ತು ಈ ಸದನಕ್ಕೂ ಸಹ ವಿವರವನ್ನು ಒದಗಿಸುತ್ತೇನೆ.

ಶ್ರೀ ಜಿ.ಕೆ. ತಕ್ಕೇಡ್.—ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿದ್ದಾರೆ. ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಇದ್ದಾಗ್ಯೂ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿಲ್ಲ, ನಿಯಮಗಳಿವೆ ಎಂದು ಹೇಳುತ್ತೀರಿ, ಆವು ಯಾವ ನಿಯಮಗಳೆಂದು ತಾವು ದಯವಾಡಿ ತಿಳಿಸುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆಯೆಂದು ನಾನು ಈಗಾಗಲೇ ತಿಳಿಸಿರುತ್ತೇನೆ. ಆದಷ್ಟು ಜಾಗ್ರತೆ ಶಿಸ್ತಿನಕ್ರಮ ಕೈಗೊಳ್ಳುತ್ತೇನೆ. ಕ್ರಮ ಕೈಗೊಳ್ಳಬೇಕಾದರೆ ಕೆಲವು ಕ್ರಮ ಇದೆ, ಅವರು ಕೋರ್ಟಿಗೆ ಹೋದರೆ, ಆದರಿಂದ ನಮ್ಮ ಹಣ ವಸೂಲಿಗೆ ಏನು ತೊಂದರೆಯಾಗಬಾರದು. ಇವೆಲ್ಲವನ್ನು ಯೋಚನೆ ಮಾಡಿ ಕಾನೂನು ಪ್ರಕಾರ ಹಣವನ್ನೂ ವಸೂಲಿ ಮಾಡಿ ತಕ್ಕ ಶಿಕ್ಷೆಯನ್ನು ಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ನನ್ನ ಪ್ರಶ್ನೆ ಏನೆಂದರೆ ೭೭-೭೮ರಲ್ಲಿ ೧½ ಲಕ್ಷ ರೂಪಾಯಿಗಳನ್ನು ಒಬ್ಬ ಅಧಿಕಾರಿ ತಿಂದುಹಾಕಿದ್ದಾರೆ. ಮೇಲಿನಾಧಿಕಾರಿಗಳ ಮೇಲೆ ಸೊಸೈಟಿಯ ಇನ್ಸ್‌ಪೆಕ್ಟರ್ ಮೇಲೆ ಏನಾಕ್ಷೆ ಮಾಡಿ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಯಾರೇ ಆಗಲಿ ಈ ವಿಷಯದಲ್ಲಿ ಭಾಗಿಗಳಾಗಿದ್ದರೆ ಅಂತಹವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ.